ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವರ್ಗೀಕರಣ

2077 (2512) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಮಧ್ಯಮ ಕೈಗಾರಿಕೆಗಳ ವರ್ಗೀಕರಣ ಮಾಡಿ ಅಭಿವೃದ್ಧಿಪಡಿಸುವ ಯೋಜನೆ ಇದ್ದಲ್ಲಿ ಅವರುಗಳಿಗೆ ಸರ್ಕಾರದಿಂದ ನೀಡಲಾಗುವ ಸಹಾಯ ಸಹಕಾರಗಳು ಯಾವುವು?

ಆ) ನಿರ್ದಿಷ್ಟ ಅವಧಿಯಲ್ಲಿ ಉದ್ದಿಮೆಗಳನ್ನು ಪ್ರಾರಂಭಿಸಿ ಉತ್ಪಾದನೆಯಲ್ಲಿ ತೊಡಗಲು ಯಾವ ಧನ ಸಹಾಯ ಸೌಲಭ್ಯಗಳಿವೆ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಅ) ರಾಜ್ಯದಲ್ಲಿ ಕೈಗಾರಿಕಾ ನೀತಿ 2001-06ರ ಪ್ರಕಾರ ರಾಜ್ಯದ ವಿವಿಧ ಪ್ರದೇಶಗಳನ್ನು ನಾಲ್ಕು ಕೈಗಾರಿಕಾ ವಲಯಗಳನ್ನಾಗಿ ವಿಂಗಡಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ:

ಎ ವಲಯ	-	ಅಭಿವೃದ್ಧಿ ಹೊಂದಿರುವ ಪ್ರದೇಶಗಳು
ಬಿ ವಲಯ	-	ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳು
ಸಿ ವಲಯ	-	ಹಿಂದುಳಿದ ಪ್ರದೇಶಗಳು
ಡಿ ವಲಯ	-	ವಿಕಾಸ ಕೇಂದ್ರಗಳು ಮತ್ತು ಸಣ್ಣ ವಿಕಾಸ ಕೇಂದ್ರಗಳು ಹಾಗೂ ವಿಶೇಷವಾದ ಕೈಗಾರಿಕಾ ಪಾರ್ಕುಗಳು ಮತ್ತು ಕೆಲವು ತಾಲ್ಲೂಕುಗಳು;

ಎ ವಲಯದಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಯಾವುದೇ ರಿಯಾಯಿತಿಗಳನ್ನು ನೀಡಲಾಗುವುದಿಲ್ಲ. ಬಿ.ಸಿ.ಡಿ. ವಲಯಗಳಲ್ಲಿ ಸ್ಥಾಪಿಸುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ, ಮುದ್ರಾಂಕ ಶುಲ್ಕ ವಿನಾಯ್ತಿ, ನೋಂದಣಿ ಶುಲ್ಕ ಇತ್ಯಾದಿಗಳನ್ನು ವಲಯಕ್ಕೆ ಅನುಗುಣವಾಗಿ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.

ಬಿ ವಲಯದಲ್ಲಿ ಸ್ಥಾಪಿಸಲ್ಪಡುವ ಮಧ್ಯಮ ಕೈಗಾರಿಕೆಗಳಿಗೆ ಶೇ. 50ರಷ್ಟು ಮುದ್ರಾಂಕ ಶುಲ್ಕದಲ್ಲಿ ವಿನಾಯ್ತಿ ಹಾಗೂ ನೋಂದಣಿ ಶುಲ್ಕದಲ್ಲಿ ವಿನಾಯ್ತಿ ನೀಡಲಾಗುತ್ತಿದೆ. ಸಿ ಮತ್ತು ಡಿ ವಲಯಗಳಲ್ಲಿ ಸ್ಥಾಪಿಸಲ್ಪಡುವ ಮಧ್ಯಮ ಕೈಗಾರಿಕೆಗಳಿಗೆ ಶೇ. 100ರಷ್ಟು ಮುದ್ರಾಂಕ ಶುಲ್ಕದಲ್ಲಿ ವಿನಾಯ್ತಿ ಹಾಗೂ ನೋಂದಣಿ ಶುಲ್ಕದಲ್ಲಿ ವಿನಾಯ್ತಿ ನೀಡಲಾಗುತ್ತದೆ.

ಆ) ಕೈಗಾರಿಕೆಗಳನ್ನು ಪ್ರಾರಂಭಿಸಲು ಅಥವಾ ಉತ್ಪಾದನೆಯಲ್ಲಿ ತೊಡಗಲು ಯಾವುದೇ ನಿರ್ದಿಷ್ಟ ಅವಧಿಯನ್ನು ನಿಗಧಿಪಡಿಸಿರುವುದಿಲ್ಲ. ಆದ್ದರಿಂದ, ಇದಕ್ಕೆ ಪ್ರತ್ಯೇಕವಾದ ಧನಸಹಾಯ ಸೌಲಭ್ಯಗಳು ಇರುವುದಿಲ್ಲ.

ರಾಜ್ಯದಲ್ಲಿ ಆಹಾರ ಸಂಸ್ಕರಣ, ಸಂರಕ್ಷಣೆ ಘಟಕಗಳಿಗೆ ಬೇಕಾಗುವ ಯಂತ್ರೋಪಕರಣ ಪೂರೈಕೆ

2079 (2514) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಸಂಸ್ಕರಣೆಯ ಮತ್ತು ಸಂಸ್ಕರಣಗಳ ಉದ್ದಿಮೆಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ಪೂರೈಸುವ ಕಂಪನಿಗಳು ಯಾವುವು? (ವಿವರ ನೀಡುವುದು);

ಆ) ಮೈಸೂರಿನ ಸಿ.ಎಫ್.ಟಿ.ಆರ್.ಐ. ಹಾಗೂ ಅಂಥಹ ಇತರ ಉದ್ಯಮಗಳಿಗೆ ಸರ್ಕಾರ ಸಹಾಯ ಮಾಡುವುದೇ;

ಇ) ಸದರಿ ಉದ್ಯಮಗಳನ್ನು ಪ್ರಾರಂಭಿಸಲು ಹಾಗೂ ಉತ್ತೇಜನ ನೀಡಲು ಸಹಾಯಧನವನ್ನು ನಿರ್ದಿಷ್ಟ ಅವಧಿಯಲ್ಲಿ ನೀಡುವ ಯೋಜನೆಗಳಿವೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಆ) ಈ ಕೈಗಾರಿಕೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ತಯಾರಿಸುವ ಹಾಗೂ ಸರಬರಾಜು ಮಾಡುವ ಸಂಸ್ಥೆಗಳು ರಾಜ್ಯದಲ್ಲಿವೆ. ಆಹಾರ ಸಂಸ್ಕರಣ ಕೈಗಾರಿಕೆಗಳಿಗೆ ಹಲವಾರು ರೀತಿಯ ಯಂತ್ರೋಪಕರಣಗಳು ಬೇಕಾಗಿದ್ದು, ಎಲ್ಲಾ ರೀತಿಯ ಯಂತ್ರೋಪಕರಣಗಳನ್ನು ಸರಬರಾಜು ಮಾಡುವ ಸಂಸ್ಥೆಗಳು ರಾಜ್ಯದಲ್ಲಿ ಇವೆ.

ಆ) ಸಿ.ಎಫ್.ಟಿ.ಆರ್.ಐ. ಸಂಸ್ಥೆ ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಯಾಗಿದ್ದು ಇದಕ್ಕೆ ಸರ್ಕಾರ ನೇರವಾಗಿ ಯಾವುದೇ ಸಹಾಯ ಮಾಡುವುದಿಲ್ಲ. ಆದರೆ ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಪರೋಕ್ಷವಾದ ಬೆಂಬಲ ನೀಡುತ್ತದೆ.

ಇ) ಆಹಾರ ಸಂಸ್ಕರಣ ಉದ್ಯಮಗಳನ್ನು ರಾಜ್ಯ ಸರ್ಕಾರ ತನ್ನ ಕೈಗಾರಿಕಾ ನೀತಿ 2001-06ರನ್ವಯ ಟ್ರಸ್ಟ್ ಸೆಕ್ಟರ್ ಕೈಗಾರಿಕೆ ಎಂದು ಗುರುತಿಸಿದ್ದು, ಆ ನೀತಿಯನ್ವಯ ನಿರ್ದಿಷ್ಟ ಮಿತಿಗೆ ಒಳಪಟ್ಟು ಬಂಡವಾಳ ಹೂಡಿಕೆ, ಸಹಾಯಧನ ಲಭಿಸುತ್ತದೆ.

ಇದಲ್ಲದೆ, ಕೇಂದ್ರ ಸರ್ಕಾರದ ಆಹಾರ ಸಂಸ್ಕರಣೆ ಉದ್ಯಮ ಸಚಿವಾಲಯವು ರಾಜ್ಯದಲ್ಲಿ ಸ್ಥಾಪಿಸುವ ಅರ್ಹ ಆಹಾರ ಸಂಸ್ಕರಣ ಉದ್ಯಮಗಳಿಗೆ ಕ್ಯಾಪಿಟಲ್ ವೆಚ್ಚ ಟೆಕ್ನಿಕಲ್ ಸಿವಿಲ್ ಕೆಲಸಗಳನ್ನು ಒಳಗೊಂಡಂತೆ ಶೇ 25ರಷ್ಟು ಅನುದಾನವನ್ನು ರೂ. 50 ಲಕ್ಷ ಗರಿಷ್ಟ ಮಿತಿಗೆ ಒಳಪಟ್ಟು ಆಯ್ದ ಯೋಜನೆಗಳ ಮೂಲಕ ನೀಡುತ್ತಿದೆ.

ರಾಜ್ಯದಲ್ಲಿ ಹೊಸ ಆಹಾರ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ

2080 (2515) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಆ) ರಾಜ್ಯದಲ್ಲಿ ಆಹಾರ ಸಂಸ್ಕರಣೆ ಉದ್ಯಮಗಳು ಎಲ್ಲೆಲ್ಲಿ ಇವೆ. (ಹೆಸರು ಮತ್ತು ಉತ್ಪಾದಿಸುವ ವಿವರ ನೀಡುವುದು);

ಆ) ಸದರಿ ಉದ್ಯಮಗಳನ್ನು ಸಹಕಾರಿ, ಖಾಸಗಿ ಮತ್ತು ಲಿಮಿಟೆಡ್ ಕಂಪನಿಗಳು ಸ್ಥಾಪಿಸಿದೆಯೇ ಇಲ್ಲಿ ಉತ್ಪಾದಿಸುವ ಉತ್ಪನ್ನಗಳ ರಫ್ತು ಅವಕಾಶ ಇದೆಯೇ;

ಇ) ಸದರಿ ಉದ್ಯಮಗಳಿಗೆ ಕಚ್ಚಾ ಪದಾರ್ಥಗಳು (ಕೃಷಿ ತೋಟಗಾರಿಕೆ ಉತ್ಪನ್ನಗಳು) ಎಲ್ಲಿ ದೊರಕುತ್ತವೆ;

ಈ) ಹೊಸ ಸಂಸ್ಕರಣ ಘಟಕಗಳನ್ನು ಆರಂಭಿಸುವ ಅವಕಾಶ ಯಾವುದಕ್ಕೆ ಇದೆ? (ವಿವರ ನೀಡುವುದು)?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಆ) ರಾಜ್ಯದಲ್ಲಿ ಸುಮಾರು 20,000 ಸಣ್ಣ ಪ್ರಮಾಣದ ಆಹಾರ ಸಂಸ್ಕರಣೆ ಉದ್ಯಮಗಳಿವೆಯಲ್ಲದೆ ಸುಮಾರು 90 ಮಧ್ಯಮ : ಬೃಹತ್ ಪ್ರಮಾಣದ ಆಹಾರ ಸಂಸ್ಕರಣೆ ಕೈಗಾರಿಕೆಗಳಿವೆ. ಈ ಕೈಗಾರಿಕೆಗಳು ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಪ್ರಸರಿಸಿವೆ.